VK
ವಿಜಯ ಕರ್ನಾಟಕ
23.08.2016

# ಇ-ಮಾರ್ಕೆಟಿಂಗ್ ಸಂಸ್ಥೆಗೆ ರಾಷ್ಟ್ರೀಯ ಪ್ರಶಸ್ತಿಯ ಗರಿ

**ಬೆಂಗಳೂರು:** ರಾಷ್ಟ್ರೀಯ ಇ-ಮಾರ್ಕೆಟಿಂಗ್ ಸಂಸ್ಥೆಗೆ ದೇಶದ ಪ್ರತಿಷ್ಠಿತ 'ಡಿಎಲ್ ಶಾ ಪ್ಲಾಟಿನಂ' ಪ್ರಶಸ್ತಿ ಲಭಿಸಿದೆ.

ದಿಲ್ಲಿಯಲ್ಲಿ ಆ.20ರಂದು ಕೊನೆಗೊಂಡ ಎರಡು ದಿನಗಳ ಭಾರತೀಯ ಗುಣಮಟ್ಟ ಪರಿಷತ್‌ನ ಸಮ್ಮೇಳನದಲ್ಲಿ ಸರಕಾರದ ಅಪರ ಕಾರ್ಯದರ್ಶಿ ಮನೋಜ್ ರಾಜನ್ ಪ್ರಶಸ್ತಿ ಸ್ವೀಕರಿಸಿದರು. ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕ ಇ-ಮಾರ್ಕೆಟಿಂಗ್ ವ್ಯವಸ್ಥೆಯನ್ನು ಜಾರಿಗೆ ತಂದ ನಂತರ ಕೇಂದ್ರ ಸರಕಾರ ಕೂಡ ಈ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ಸದ್ಯ ರಾಜ್ಯದ 152 ಎಪಿಎಂಸಿಗಳ ಪೈಕಿ 142ರಲ್ಲಿ ರೈತರು ಹಾಗೂ ವ್ಯಾಪಾರಿಗಳು ಪಾರದರ್ಶಕ ರೀತಿಯಲ್ಲಿ ವಹಿವಾಟು ನಡೆಸುತ್ತಿದ್ದಾರೆ. ರಾಜ್ಯದಲ್ಲಿ ಈವರೆಗೆ ಆನ್‌ಲೈನ್ ಟೆಂಡರ್ ಮೂಲಕ 49 ಲಕ್ಷ ಲಾಟ್‌ಗಳಿಂದ 320 ಲಕ್ಷ ಕ್ವಿಂಟಾಲ್‌ನಷ್ಟು ವಹಿವಾಟು ನಡೆದಿದೆ.

ಇದರ ಒಟ್ಟು ಮೌಲ್ಯ 26 ಸಾವಿರ ಕೋಟಿ ರೂ. ಆಗಿದೆ. ಈ ವ್ಯವಸ್ಥೆಯಲ್ಲಿ ಪಾಲ್ಗೊಳ್ಳಲು ಈತನಕ 25 ಲಕ್ಷ ರೈತರು ತಮ್ಮ ಹೆಸರನ್ನು ನೋಂದಣಿ ಮಾಡಿಕೊಂಡಿದ್ದಾರೆ. ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಿ ರೈತರಿಗೆ ಪಾರದರ್ಶಕ ರೂಪದಲ್ಲಿ ತಮ್ಮ ಬೆಳೆಗೆ ಹಣ ಪಡೆದುಕೊಳ್ಳಲು ಇ-ಮಾರ್ಕೆಟಿಂಗ್ ವ್ಯವಸ್ಥೆ ಅನುಕೂಲ ಕಲ್ಪಿಸಿದೆ.



ರಾಜ್ಯ ಸರಕಾರಿ ಸ್ವಾಮ್ಯದ ರಾಷ್ಟ್ರೀಯ ಇ-ಮಾರ್ಕೆಟ್ ಸಂಸ್ಥೆ(ರೆಮ್ಸ್)ಯ ಪರವಾಗಿ ವ್ಯವಸ್ಥಾಪಕ ನಿರ್ದೇಶಕ ಮನೋಜ್ ರಾಜನ್ ಅವರು ಕೇಂದ್ರ ಸಚಿವ ಜಯಂತ್ ಸಿನ್ಹಾ ಅವರಿಂದ 'ಡಿಎಲ್ ಶಾ-ಪ್ಲಾಟಿನಂ ಪ್ರಶಸ್ತಿ' ಸ್ವೀಕರಿಸಿದರು.